ದಿನಾಂಕಃ 03-02-2020.

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

ನನ್ನ ತಂದೆ ಹೆಸರು ಪೈರೇಗೌಡ. ನಾವು 4 ಜನ ಅಣ್ಣ ತಮ್ಮಂದಿರು, ರಂಗಸಾಮಣ್ಣ, ಈರೇಗೌಡ, ಉಗ್ರಪ್ಪ , ಪೈರಣ್ಣ. ನಾನು 4 ನೇ ತರಗತಿ ಓದಿದ್ದೇನೆ. ನಿಮ್ಮ ಪೂರ್ವಜರ ಕಾಲದಿಂದಲೂ ವ್ಯವಸಾಯವೇ ನಿಮ್ಮ ವೃತ್ತಿ ಎಂದರೆ ಸಾಕ್ಷಿ ವ್ಯವಸಾಯ ಮತ್ತು ವ್ಯಾಪಾರ ಎರಡನ್ನೂ ಮಾಡುತ್ತೇವೆ ಎನ್ನುತ್ತಾರೆ. ನನಗೆ 3 ಜನ ಮಕ್ಕಳು, ರಂಗನಾಥಪ್ಪ , ಮರಿಯಣ್ಣ , ಪರಮೇಶಪ್ಪ. ನನ್ನ ಮಗ ಮರಿಯಣ್ಣನಿಗೆ ಸಣ್ಣತಾಯಮ್ಮನನ್ನು ಮದುವೆ ಮಾಡಿದ್ದೇವೆ ಎಂದರೆ ಸರಿ. ಸಣ್ಣತಾಯಮ್ಮ ಮತ್ತು ಮರಿಯಣ್ಣನವರ ಮಗ ಪವನ್‌ಕುಮಾರ್ ಎಂದರೆ ನನಗೆ ಗೊತ್ತಿಲ್ಲ. ನಮಗೂ ಅವರಿಗೂ ಸಂಬಂಧ ಇಲ್ಲ ಎನ್ನುತ್ತಾರೆ. ರಂಗನಾಥಪ್ಪ , ಮರಿಯಣ್ಣ , ಪರಮೇಶಪ್ಪ ಮತ್ತು ನಾನು ಜಂಟಿ ಕುಟುಂಬದಲ್ಲಿದ್ದೇವೆ ಎಂದರೆ ಸರಿಯಲ್ಲ. ಎಲ್ಲರೂ ಬೇರೆ ವಾಸವಿದ್ದಾರೆ ಎನ್ನುತ್ತಾರೆ. ನಾವು ಬಾಯಿ ಮಾತಿನಲ್ಲಿ ಬೇರೆ ಬೇರೆ ಆಗಿದ್ದೇವೆ. ಸಣ್ಣ ತಾಯಮ್ಮನವರ ತವರು ಮನೆ ಗುಬ್ಬಿ ತಾಲ್ಲೂಕು, ಚೇಳೂರು ಹೋಬಳಿ, ಚಿಕ್ಕಎಡಿಗೇಹಳ್ಳಿ ಎಂದರೆ ಸರಿ. ನನ್ನ ಮಗ ಮರಿಯಣ್ಣನಿಗೆ ಸಣ್ಣ ತಾಯಮ್ಮನನ್ನು 29.06.1997 ರಲ್ಲಿ ಮದುವೆ ಮಾಡಿಕೊಂಡು ಬಂದಿದ್ದೇವು ಎಂದರೆ ಸರಿ. ಸಣ್ಣತಾಯಮ್ಮನವರ ತವರು ಮನೆಯಲ್ಲಿ ಎಲ್ಲಾ ವರೋಪಚಾರ, ಒಡವೆ ವಸ್ತ್ರಗಳು ಕೊಟ್ಟು ಮದುವೆ ಮಾಡಿಲಾಯಿತು ಎಂದರೆ ಸರಿ. ಮದುವೆ ಆಗಿದ್ದ 10 ತಿಂಗಳು ಚೆನ್ನಾಗಿ ನೋಡಿಕೊಂಡಿರಿ ಎಂದರೆ ಸರಿಯಲ್ಲ. ಸಾಕ್ಷಿ ಒಂದು ತಿಂಗಳು ಸಹ ಸಂಸಾರ ಮಾಡಿಲ್ಲ ಎನ್ನುತ್ತಾರೆ. ಆನಂತರ ಮರಿಯಣ್ಣ ಸಣ್ಣತಾಯಮ್ಮನನ್ನು ಉದಾಸೀನ ಮಾಡಿ ಊಟ ಬಟ್ಟೆ ಕೊಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಗರ್ಭಿಣಿ ಆದ ನಂತರ ಸಣ್ಣತಾಯಮ್ಮ ತವರು

ಮನೆಗೆ ಬಂದು ವಾಸವಾದಳು ಎಂದರೆ ಸರಿಯಲ್ಲ. ಪವನಕುಮಾರ ಹುಟ್ಟಿದ ನಂತರ ಸಣ್ಣತಾಯಮ್ಮ ನಮ್ಮ ಮನೆಗೆ ಬಂದರು, ಆಗ ನಾವು ವರದಕ್ಷಿಣೆ ಕೊಟ್ಟಿಲ್ಲ ಎಂದು ಅವರನ್ನು ಮನೆಯಿಂದ ಆಚೆ ಹಾಕಿದೆವು ಎಂದರೆ ಸರಿಯಲ್ಲ. 2011 ರಲ್ಲಿ ಗುಬ್ಬಿ ನ್ಯಾಯಾಲಯದಲ್ಲಿ ಸಣ್ಣತಾಯಮ್ಮ ಮತ್ತು ಪವನಕುಮಾರ ಜೀವನಾಂಶಕ್ಕಾಗಿ ದಾವೆ ಹೂಡಿದ್ದಾರೆ ಎಂದರೆ ಸರಿ. ಆ ದಾವೆಯಲ್ಲಿ ಜೀವನಾಂಶ ಕೊಡುವಂತೆ ಆದೇಶವಾಗಿದೆ ಎಂದರೆ ಸರಿ. ಆ ದಾವೆಯಲ್ಲೂ ಸಹ ಮರಿಯಣ್ಣ ಈ ದಾವೆಯ ವಾದಿಯನ್ನು ತನ್ನ ಮಗ ಅಲ್ಲ ಎಂದು ತಕರಾರು ಸಲ್ಲಿಸಿದ್ದರು ಎಂದರೆ ಸರಿ. ಆ ದಾವೆಯಲ್ಲಿ ಸಾಕಷ್ಟು ದಾಖಲೆಗಳ ಆಧಾರದ ಮೇಲೆ ಆದೇಶ ಮಾಡಲಾಗಿದೆ ಎಂದರೆ ಸಾಕ್ಷಿ ಅದರಲ್ಲಿ ಜೀವನಾಂಶ ಕೊಡುವಂತೆ ಆದೇಶವಾಗಿದೆ ನಾವು ಕಟ್ಟುತ್ತಿದ್ದೇವೆ ಎನ್ನುತ್ತಾರೆ. ಆ ಆದೇಶದ ಮೇಲೆ ಮೇಲ್ಮನವಿ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ಸಲ್ಲಿಸಿದ್ದೆವು ಅವರು ಬರಲಿಲ್ಲ ನಾವು ಹೋಗಲಿಲ್ಲ ಹಾಗಾಗೀ ವಜಾ ಆಯಿತು ಎನ್ನುತ್ತಾರೆ. ಗುಬ್ಬಿ ನ್ಯಾಯಾಲಯದ ಪ್ರಕರಣದಲ್ಲಿ ನಾನೇ ಹೇಳಿ ತಕರಾರು ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ಆ ನ್ಯಾಯಾಲಯಕ್ಕೂ ಸಹ ನಾನು ನನ್ನ ಮಗನ ಜೊತೆ ಹೋಗುತ್ತಿದ್ದೆ ಎಂದರೆ ಕೆಲವೊಮ್ಮೆ ಹೋಗುತ್ತಿದ್ದೆ ಎನ್ನುತ್ತಾರೆ. ಪ್ರತಿ ವಿಚಾರಣೆ ದಿನವೂ ಸಹ ನ್ಯಾಯಾಲಯಕ್ಕೆ ಬರುತ್ತಾರೆ ಎಂದರೆ ಸರಿ. ನನ್ನ ಮಗನಿಗೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಆರೋಗ್ಯ ಚೆನ್ನಾಗಿದೆ ಎಂದರೆಸರಿ. ಆಗಿದ್ದರೂ ಸಹ ನೀವೇ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿ. ನಾನು ಉದ್ದೇಶ ಪೂರ್ವಕವಾಗಿ ಮರಿಯಣ್ಣನನ್ನು ವಿಚಾರಣೆ ಮಾಡಲು ಬಿಡುತ್ತಿರಲ್ಲಿಲ್ಲ ಎಂದರೆ ಸರಿಯಲ್ಲ. ನಾನು ಖಾಸಗಿ ಅಥ್ವಾ ಸರ್ಕಾರಿ ಉದ್ಯೋಗದಲ್ಲಿಲ್ಲ ಎಂದರೆ ಸರಿ. ನೀವು ವ್ಯಾಪಾರ ಮಾಡುತ್ತೇನೆ ಎನ್ನುವುದಕ್ಕೆ ಸಾಕ್ಷಿ ಇದೆಯಾ ಎಂದರೆ ಇಲ್ಲ ಎನ್ನುತ್ತಾರೆ. ನನಗೆ ವಯಸ್ಸಾಗಿದ್ದರಿಂದ 2 ವರ್ಷಗಳಿಂದ ನನ್ನ ಮಗ ರಂಗನಾಥಪ್ಪನನ್ನು ವ್ಯಾಪಾರಕ್ಕೆ ಕಳುಹಿಸುತ್ತೇನೆ ಎನ್ನುತ್ತಾರೆ. ನಿಡಿ-1 ರಲ್ಲಿ ಸರ್ವೆ ನಂ 114/3 ರಲ್ಲಿನ ಸ್ವತ್ತು ಜಂಟಿ

ಕುಟುಂಬದ ಸ್ವತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನನ್ನ ಹೆಂಡತಿ ಹೆಸರಿನಲ್ಲಿದೆ ಎನ್ನುತ್ತಾರೆ. ನಿಮ್ಮ ಪ್ರತಿವಾದ ಪತ್ರದಲ್ಲಿ ಆ ಸ್ವತ್ತು ನಿಮ್ಮ ಹೆಂಡತಿಗೆ ಸೇರಿದ್ದು ಅವರ ತವರು ಮನೆಯವರು ಕೊಡಿಸಿದ್ದು ಎಂದು ಬರೆಸಿದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನಂತರ ಈಗ ಹೇಳುತ್ತಿದ್ದೇನೆ ಎನ್ನುತ್ತಾರೆ. ನನ್ನ ಹೆಂಡತಿ ಗುಡ್ಡೆನಹಳ್ಳಿಯವರು. ಅವರಿಗೆ ಒಬ್ಬನೇ ಅಣ್ಣ ಇಬ್ಬರು ಅಕ್ಕತಂಗಿಯರು. ನಿಮ್ಮ ಮಾವ ಇನ್ನು ಇಬ್ಬರು ಹೆಣ್ಣು ಮಕ್ಕಳಿಗೆ ಜಮೀನು ಕೊಡಿಸಿದ್ದಾರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಾವು ಈ ಜಮೀನನ್ನು ಪಡೆದುಕೊಂಡು ಈ ಜಮೀನಿನಿಂದ ಬಂದ ಆದಾಯದಿಂದ ಉಳಿದ ಸ್ವತ್ತುಗಳನ್ನು ಖರೀದಿಸಿದ್ದೀರಿ ಎಂದರೆ ಸರಿಯಲ್ಲ. ನಿಡಿ-1ರಲ್ಲಿ ಆ ಸ್ವತ್ತನ್ನು ನಿಮ್ಮ ಮಾವ ಕೊಡಿಸಿದ್ದಾರೆಂದು ಬರೆದಿದೆಯಾ ಎಂದರೆ ಸಾಕ್ಷಿ ಬರೆದಿಲ್ಲ ನಾನು ಹೇಳುತ್ತೇನೆ ಎನ್ನುತ್ತಾರೆ. ಆ ಸ್ವತ್ತು ಸುಮಾರು 80-90 ಸಾವಿರಕ್ಕೆ ಕ್ರಯವಾಯಿತು. ಆ ಹಣವನ್ನು ನಮ್ಮ ಮಾವ ನಿಮ್ಮ ಎದುರಿಗೆ ಎಣಿಸಿಕೊಟ್ಟರಾ ಎಂದರೆ ನನ್ನ ಎದುರಿಗೆ ಎಣಿಸಿಕೊಟ್ಟರು ಎನ್ನುತ್ತಾರೆ. ನನ್ನ ಹೆಂಡತಿಗೆ ಆ ಜಮೀನನ್ನು ಕೊಡಿಸಿದಾಗ ನಮ್ಮ ಮದುವೆ ಆಗಿ ಸುಮಾರು 30-40 ವರ್ಷ ಆಗಿತ್ತು, ನನ್ನ ಮಾವ ಬದುಕಿಲ್ಲ. ಈ ಜಮೀನನ್ನು ಕೊಡಿಸಿರುವುದು ನಿಮ್ಮ ನಾದಿನಿಯರಿಗೆ ಗೊತ್ತಿದೆಯಾ ಎಂದರೆ ಸಾಕ್ಷಿ ಗೊತ್ತಿಲ್ಲಾ ಎನ್ನುತ್ತಾರೆ. ನಮ್ಮ ಹೆಂಡತಿಯ ತವರು ಮನೆಗೆ ಹೋಗಿ ಬಂದು ಮಾಡುತ್ತೀರಾ ಎಂದರೆ ಆಗಾಗ ಹೋಗುತ್ತಿರುತ್ತೇವೆ ಎನ್ನುತ್ತಾರೆ.

**ವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಪಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರ್‌ಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಶಿರಾ.